# ಧರ್ಮಶಾಸ್ತ್ರಗಳ ಆವಶ್ಯಕತೆ ಹಾಗೂ ಅವುಗಳ ಕಾರ್ಯಪ್ರಣಾಳಿ

**ಸ್ವಾಮಿ ಕರುಣಾಕರಾನಂದ**

ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಸಾಮಾಜಿಕ ಜೀವನವನ್ನು ವಿಶೇಷವಾಗಿ ಪ್ರಭಾವಿಸಿರುವ ಧರ್ಮಶಾಸ್ತ್ರಗಳು ಗೃಹಸ್ಥ ಜೀವನದ ಬಗ್ಗೆ ಹಾಕಿಕೊಟ್ಟಿರುವ ನೀತಿಸಂಹಿತೆಗಳ ಸಂಕ್ಷಿಪ್ತ ಪರಿಚಯ ಹಾಗೂ ವಿಶ್ಲೇಷಣೆ ಇಲ್ಲಿದೆ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು ಸಂಸ್ಕೃತ ಹಾಗೂ ವೇದಾಂತ ಶಾಸ್ತ್ರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದಾರೆ. ಅವರು ಪ್ರಸ್ತುತ ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರಾಗಿದ್ದು, ಅವರ ಅನೇಕ ಬರಹಗಳು ಈಗಾಗಲೇ 'ವಿವೇಕಪ್ರಭ'ದಲ್ಲಿ ಪ್ರಕಟವಾಗಿವೆ.

ಸಂಪೂರ್ಣ ಸೃಷ್ಟಿ ಅವಿದ್ಯೆ-ಕಾಮ-ಕರ್ಮಗಳಿಂದ ಉಂಟಾಗಿದೆ. ಕಾಮವಿಲ್ಲದಿದ್ದರೆ ಕರ್ಮವೂ ಇಲ್ಲ. '**ಅಕಾಮಸ್ಯ ಕ್ರಿಯಾ ಕಾಚಿತ್ ದೃಶ್ಯತೇ ನೇಹ ಕರ್ಹಿಚಿತ್ । ಯದ್ಯದ್ ಹಿ ಕುರುತೇ ಕಿಂಚಿತ್ ತತ್ ತತ್ ಕಾಮಸ್ಯ ಚೇಷ್ಟಿತಮ್ ॥**' *(ಮನುಸ್ಮೃತಿಃ ೨.೪)* 'ಕಾಮವೇ ಇಲ್ಲದಿರುವವನಲ್ಲಿ ಎಲ್ಲಿಯೂ ಕರ್ಮವು ಕಂಡು ಬರುವುದಿಲ್ಲ. ಏನೇನನ್ನು ಮಾಡುವನೋ ಅವೆಲ್ಲವೂ ಕಾಮದ್ದೇ ಕೆಲಸ.' ಅವಿದ್ಯೆಯಿಂದ ತನ್ನ ಸ್ವರೂಪವನ್ನು ಮರೆತ ಜೀವಿಯು ಪರಮಾರ್ಥವಾಗಿ ತಾನು ಪರಿಪೂರ್ಣನಾದರೂ, ತನ್ನ ಪರಿಪೂರ್ಣತೆಗಾಗಿ ಇನ್ನೊಂದನ್ನು ಬಯಸುತ್ತದೆ. ಹಾಗೆ ಬಯಸಿದ್ದನ್ನು ಪಡೆಯಲು ಕರ್ಮದಲ್ಲಿ ತೊಡಗುತ್ತದೆ. ಹೀಗೆ ಕಾಮಿಸಿದವುಗಳನ್ನು ಪಡೆದು ಅವುಗಳಿಂದ ಪುನಃ ಈ ಸಂಸಾರಕ್ಕೇ ಕಟ್ಟು ಬೀಳುತ್ತದೆ. ಹಾಗೆಯೇ, ಕಾಮಿಸಿದ ವಸ್ತುವನ್ನು ಪಡೆಯುವುದಕ್ಕಾಗಿ ಎಲ್ಲ ರೀತಿಯಿಂದಲೂ, ಆ ಮಾರ್ಗವು ಸರಿಯೋ, ತಪ್ಪೋ, ಪ್ರಯತ್ನಿಸುತ್ತದೆ. ಹೀಗೆ ಮತ್ತೂ ಗಟ್ಟಿಯಾಗಿ ಈ ಸಂಸಾರಕ್ಕೆ ಕಟ್ಟು ಬೀಳುತ್ತ ಇದರ ದ್ವಂದ್ವಗಳಿಂದ ಅತೀವ ದುಃಖಕ್ಕೆ ಒಳಗಾಗುತ್ತದೆ. ದುಃಖನಿವಾರಣೆಗಾಗಿ ಮತ್ತೆ ಸಂಸಾರದ ನಿಸ್ಸಾರವಾದ, ಆಶಾರೂಪವಾದ ಭೋಗಗಳಿಗೇ ಶರಣುಹೋಗುತ್ತದೆ. ಅಮೃತವೆಂದು ಸೇವಿಸಿದ ಈ ಸಾಂಸಾರಿಕ ಸುಖ ವಿಷದಂತೆ ಮಹಾದುಃಖವನ್ನೇ ನೀಡುತ್ತದೆ. ಜೀವಿಯನ್ನು ಈ ವಿಷಜಾಲದಿಂದ ಮುಕ್ತಗೊಳಿಸಲು ಭಗವತ್ಕೃಪಾಸ್ವರೂಪವಾದ ಶಾಸ್ತ್ರಗಳು ಧರ್ಮವನ್ನು ಈ ಸಂಸಾರಕ್ಕೆ ನೀಡಿವೆ. ಮನುಷ್ಯರ ಕಾಮಗಳಿಗೆ ವ್ಯವಸ್ಥೆಯನ್ನು ಕಲ್ಪಿಸಿ, ಹೇಗೆ ಕ್ರಮವಾಗಿ ಕಾಮದಿಂದ ನಿಷ್ಕಾಮತ್ವವನ್ನು, ಜೀವಿಗಳು ಪುನಃ ತಮ್ಮ ಸ್ವರೂಪವಾದ ಪರಿಪೂರ್ಣತೆಯನ್ನು ಪಡೆಯಬಹುದೆಂದು ಮಾರ್ಗದರ್ಶನ ನೀಡುತ್ತವೆ. '**ತೇಷು ಸಮ್ಯಗ್ವರ್ತಮಾನೋ ಗಚ್ಛತ್ಯಮರ ಲೋಕತಾಮ್ । ಯಥಾಸಂಕಲ್ಪಿತಾಂಶ್ಚೇಹ ಸರ್ವಾನ್ ಕಾಮಾನ್ ಸಮಶ್ನುತೇ ॥**' *(ಮನುಸ್ಮೃತಿಃ, ೨.೫)* 'ವೇದದಲ್ಲಿ ವಿಧಿಸಿರುವಂತೆ ಕರ್ಮಗಳನ್ನು ಯಥಾವತ್ತಾಗಿ ನಿರ್ವಹಿಸುವವನು ಸ್ವರ್ಗಕ್ಕೆ ಹೋಗುವನು. ಈ ಜಗತ್ತಿನಲ್ಲಿಯೇ ಅವನು ಬಯಸಿದ ಎಲ್ಲವುಗಳನ್ನೂ ಹೊಂದುವನು.' ಒಂದು ಸೂಕ್ಷ್ಮವನ್ನು ಗಮನಿಸಬೇಕು. ಧರ್ಮಶಾಸ್ತ್ರಗಳ ವಿಧಿಗಳ ವಿಷಯವಾಗಿ ಹೇಳುವುದಾದರೆ ಅವುಗಳು ಕಾಮಗಳನ್ನು ವಿಧಿಸುವುದಿಲ್ಲ. ಜೀವಿಗಳ ಕಾಮನೆಗಳಿಗೆ ಮಾರ್ಗದರ್ಶನ ನೀಡಿ ಶುದ್ಧಿ ಮಾಡುತ್ತವೆ ಅಷ್ಟೆ. ಕಾಮನೆಗಳು ಅವಿದ್ಯೆಯಿಂದ, ವಾಸನೆಗಳಿಂದ ತಾವೇ ಉಂಟಾಗುತ್ತವೆ. ಮಾನವನಲ್ಲಿರುವ ಈ ಅಸಂಸ್ಕೃತ ಕಾಮನೆಗಳು ಅವನನ್ನು ಕೆಳಕ್ಕೆ ತಳ್ಳುತ್ತವೆ. ಅವನಲ್ಲಿ ಉದಾತ್ತ ಕಾಮನೆಗಳು ಉದಿಸುವಂತೆ ಮಾಡಿದಲ್ಲಿ ಅವುಗಳಿಂದ ಮೇಲಕ್ಕೆ ಎತ್ತಲ್ಪಡುತ್ತಾನೆ. ಅವನಲ್ಲಿ ಉದಾತ್ತ ಕಾಮನೆಗಳು ಉದಿಸಬೇಕಾದಲ್ಲಿ ಮಾನವ ಸಂಸ್ಕೃತನಾಗಬೇಕು. ಈ ಸಂಸ್ಕಾರವನ್ನು ಧರ್ಮಶಾಸ್ತ್ರಗಳು ಉಂಟುಮಾಡುತ್ತವೆ. ಕಾಮನೆಗಳಿಂದ ಪ್ರೇರಿತನಾದ ಮಾನವ ಅವುಗಳು ಎಳೆದುಕೊಂಡು ಹೋದಲ್ಲಿ ಹೋಗುತ್ತ ಸ್ವಾರ್ಥಿಯಾಗುತ್ತಾನೆ. ತಾನು ಯಾವ ಸಮಾಜದಲ್ಲಿ ಇರುವನೋ, ಯಾವ ಸಮಾಜವು ತನ್ನ ಏಳ್ಗೆಗೆ ಕಾರಣವೋ ಅದನ್ನೂ ಕಡೆಗಣಿಸಿ ತನ್ನ ಸುಖವನ್ನು ಮಾತ್ರ ಸಾಧಿಸುತ್ತಾನೆ. ತನ್ನ ಕರ್ತವ್ಯಗಳ ಬಗ್ಗೆ ಕುರುಡಾಗುತ್ತಾನೆ. ಸೃಷ್ಟಿಯಿಂದ ತನ್ನನ್ನು ಪ್ರತ್ಯೇಕವೆಂಬುದಾಗಿ ಭಾವಿಸುತ್ತ ದ್ವೀಪದಂತೆ



ಆಗುವನು. ಧರ್ಮಶಾಸ್ತ್ರಗಳು ಸಮಾಜದ ಪ್ರತಿ ಪ್ರಕೃತಿಯ ಹಿಂದಿರುವ ವಿವಿಧ ಶಕ್ತಿಗಳ, ಪ್ರತಿ ಮಾನವನ ಕರ್ತವ್ಯಗಳನ್ನು ನೆನಪಿಸುತ್ತವೆ. ಮಾನವನು ಸೃಷ್ಟಿಯ ಒಂದು ಅವಿಭಾಜ್ಯ ಅಂಗ ಮಾತ್ರವೆಂಬುದನ್ನು ನೆನಪಿಸಿಕೊಡುತ್ತವೆ.

ಧರ್ಮಶಾಸ್ತ್ರಗಳು ವಿಧಿಸಿರುವ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಮಾನವನ ಮನಸ್ಸು ಶುದ್ಧಗೊಳ್ಳುತ್ತ ಅವನಲ್ಲಿರುವ ಕಾಮನೆಗಳೂ ಸಂಸ್ಕೃತಗೊಳ್ಳುತ್ತ ಉದಾತ್ತವಾಗುತ್ತವೆ. ಸಾಮಾನ್ಯ ಧರ್ಮಗಳನ್ನು ಉಪದೇಶ ಮಾಡುವ ಧರ್ಮಶಾಸ್ತ್ರಗಳು ಮಾನವನಲ್ಲಿ ವೈರಾಗ್ಯ, ವಿವೇಕ, ಮುಮುಕ್ಷುತ್ವಗಳನ್ನು ಉತ್ಪತ್ತಿ ಮಾಡುವ ಗುಣಗಳು ಜಾಗೃತವಾಗುವಂತೆ ಮಾಡಿ, ಮಾನವನ ಅಧ್ಯಾತ್ಮ ಜೀವನಕ್ಕೆ ಬುನಾದಿಯನ್ನು ಹಾಕುತ್ತವೆ. ವೈರಾಗ್ಯವೇ ಮುಂತಾದ ಆ ಗುಣಗಳು ಬಹಿರ್ಮುಖನಾದ ಮಾನವನನ್ನು ಅಂತರ್ಮುಖನಾಗುವಂತೆ ಪ್ರೇರಿಸುತ್ತವೆ. ಅಂತರ್ಮುಖನಾದ ಮಾನವನು ಶ್ರವಣಾದಿಗಳಿಂದ, ಧ್ಯಾನ-ಸಮಾಧಿಗಳಿಂದ ತನ್ನಲ್ಲೇ ಹುದುಗಿರುವ ಆನಂದಸ್ವರೂಪವಾದ ತತ್ತ್ವವನ್ನು ಕಾಣುತ್ತಾನೆ, ಕೃತಕೃತ್ಯನಾಗುತ್ತಾನೆ. ಹೀಗೆ, ಅಧ್ಯಾತ್ಮಶಾಸ್ತ್ರಗಳ ಉಪದೇಶಗಳ ಹಿನ್ನೆಲೆಯಲ್ಲೇ ಧರ್ಮಶಾಸ್ತ್ರಗಳು ಕಾರ್ಯ ನಿರ್ವಹಿಸುತ್ತವೆ. **ಭಾಗವತ**ದಲ್ಲಿ *(೧೧.೩.೪೪)* ವೇದಗಳ ಕರ್ಮ ವಿಧಾನವನ್ನು ಪರೋಕ್ಷವಾದವೆಂದು ಕರೆದಿದೆ. ಅದನ್ನೇ ವಿವರಿಸುತ್ತ ಹೇಳಲಾಗಿದೆ: **'ಕರ್ಮಮೋಕ್ಷಾಯ ಕರ್ಮಾಣಿ ವಿಧತ್ತೇ ಹ್ಯಗದಂ ಯಥಾ॥'** 'ವೇದಗಳ ಶಬ್ದಗಳು ಒಂದರ್ಥವನ್ನು ಹೇಳಿದಂತೆ ಇರುತ್ತವೆ. ಆದರೆ ಅವುಗಳ ತಾತ್ಪರ್ಯ ಬೇರೆಯೇ ಆಗಿರುತ್ತದೆ. ಸಣ್ಣ ಮಕ್ಕಳಿಗೆ ಔಷಧಿಯನ್ನು ಕೊಡುವ ಮುಂಚೆ ಮಿಠಾಯಿಗಳ ಆಮಿಷ ನೀಡಿದಂತೆ, ಕರ್ಮಗಳಿಂದ ಬಿಡುಗಡೆ ಹೊಂದಲು ಕರ್ಮಗಳನ್ನು ವಿಧಿಸುತ್ತವೆ.' ವೇದಗಳ, ಧರ್ಮಶಾಸ್ತ್ರಗಳ ಈ ನಾಡಿಯನ್ನು ಸರಿಯಾಗಿ ಅರಿತುಕೊಂಡಾಗ ತಿಳಿದು ಬರುವುದೇನೆಂದರೆ ಅವುಗಳ ಪರಮ ತಾತ್ಪರ್ಯ ಮನುಷ್ಯನನ್ನು ಮುಕ್ತಿಯೆಡೆಗೆ ಒಯ್ಯುವುದೇ ಆಗಿದೆ.

**'ಇಜ್ಯಾಚಾರದಮಾಹಿಂಸಾದಾನಸ್ವಾಧ್ಯಾಯ ಕರ್ಮಣಾಮ್ ।**
**ಅಯಂ ತು ಪರಮೋ ಧರ್ಮೋ ಯದ್ಯೋಗೇನಾತ್ಮದರ್ಶನಮ್ ॥'**

'ಯಜ್ಞ, ಸದಾಚಾರ, ಇಂದ್ರಿಯನಿಗ್ರಹ, ಕಾಯೇನ ವಾಚಾ ಮನಸಾ ಹಿಂಸಾತ್ಯಾಗ, ದಾನ, ಸ್ವಶಾಖಾ ವೇದಾಧ್ಯಯನ ಈ ಎಲ್ಲವುಗಳಿಗಿಂತ ಯೋಗದಿಂದ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದೇ ಅತ್ಯುತ್ತಮವಾದ ಧರ್ಮ.' *(ಯಾಜ್ಞವಲ್ಕ್ಯ ಸ್ಮೃತಿಃ, ೧.೮)* ಎಂಬ ಯಾಜ್ಞವಲ್ಕ್ಯಸ್ಮೃತಿಯ ಶ್ಲೋಕ ಇದನ್ನೇ ನೆನಪಿಸಿಕೊಡುತ್ತದೆ. ಹೀಗೆ ಧರ್ಮಶಾಸ್ತ್ರಗಳು ಮೊದಲು ಮಾನವನು ಮೃತ್ಯುಸ್ವರೂಪವಾದ ತನ್ನ ಪ್ರಾಣಿಸಹಜ ಪ್ರವೃತ್ತಿಗಳಿಂದ ಬಿಡುಗಡೆ ಹೊಂದಿ ನಿಜವಾದ ಅರ್ಥದಲ್ಲಿ ಮಾನವನಾಗಲು **(ಅವಿದ್ಯಯಾ ಮೃತ್ಯುಂ ತೀರ್ತ್ವಾ-** *ಈಶಾವಾಸ್ಯೋಪನಿಷತ್-೧೧)* ಸಹಾಯ ಮಾಡುತ್ತವೆ.

## ಗೃಹಸ್ಥ-ಆಶ್ರಮದಲ್ಲಿ ಮನಶ್ಶುದ್ಧಿಗೆ ಸಾಧನಗಳು

ಹಿಂದೂ ಸಮಾಜದ ಯಾರೇ ಆಗಿರಲಿ ಆತ ತಾನಿದ್ದಲ್ಲೇ ಪರಮ ಶ್ರೇಯಸ್ಸಿಗಾಗಿ ಪ್ರಯತ್ನಿಸಬಹುದಾಗಿದೆ. ಆದ್ದರಿಂದಲೇ ಆತ ಯಾವುದೇ ಸಮಯದಲ್ಲಿ ಯಾವುದಾದರೂ ಆಶ್ರಮದಲ್ಲಿರುತ್ತಾನೆ. 'ಆ'-'ಸಮಂತಾತ್' 'ಶ್ರಾಮ್ಯತಿ'-'**ತಪಃ ಆಚರತಿ ಪರಮಶ್ರೇಯಸೇ ಇತಿ ಆಶ್ರಮಃ**' — ಎಲ್ಲ ಬಗೆಯಿಂದಲೂ ತನ್ನ ಪರಮ ಶ್ರೇಯಸ್ಸಿಗಾಗಿ ತಪಸ್ಸನ್ನು ಆಚರಿಸುತ್ತಾನೆ/ಳೆ. ಇದೇ ಆಶ್ರಮ ಪದದ ಅರ್ಥ. ಗೃಹಸ್ಥಾಶ್ರಮವು ಎಲ್ಲ ಆಶ್ರಮಗಳಿಗೆ ಆಧಾರ. ಹೀಗಾಗಿ ಗೃಹಸ್ಥನಾದವನು ಸಾಧನೆಗಾಗೆಂದೇ ವಿಶೇಷ ಸಮಯ ನೀಡಲು ಸಾಧ್ಯವಿಲ್ಲ. ಹಾಗಿದ್ದರೆ ಗೃಹಸ್ಥನಿಗೆ ಮಾರ್ಗವೇನು? ಪ್ರತಿನಿತ್ಯವೂ ಪಂಚಮಹಾಯಜ್ಞಗಳನ್ನು ಆಚರಿಸಬೇಕು. ಬ್ರಹ್ಮಯಜ್ಞ, ಪಿತೃಯಜ್ಞ, ದೈವಯಜ್ಞ, ಭೂತಯಜ್ಞ ಹಾಗೂ ನೃಯಜ್ಞ- ಇವೇ ಆ ಪಂಚಮಹಾಯಜ್ಞಗಳು. ನಿತ್ಯವೂ ವೇದಾಧ್ಯಯನವೇ ಬ್ರಹ್ಮಯಜ್ಞ; ಪಿತೃತರ್ಪಣವೇ ಪಿತೃಯಜ್ಞ; ದೇವತೆಗಳನ್ನು ಕುರಿತು ಮಾಡುವ ಯಜ್ಞವೇ ದೈವಯಜ್ಞ, ಭೂತಗಳಿಗೆ ಬಲಿಯೇ ಭೂತಯಜ್ಞ ಮತ್ತು ಅತಿಥಿಸತ್ಕಾರವೇ ನೃಯಜ್ಞ. ಪ್ರತಿನಿತ್ಯವೂ ಇವುಗಳನ್ನು ಆಚರಿಸುವ ಗೃಹಸ್ಥನು ಪಾಪಗಳಿಂದ ಮುಕ್ತನಾಗುತ್ತಾನೆ. ಜೀವನ ನಡೆಯಬೇಕಾದರೆ ಹಿಂಸೆ ಅನಿವಾರ್ಯ. ಇಲ್ಲಿ ಹಿಂಸೆ ಎನ್ನುವ ಶಬ್ದವನ್ನು ಕೊಲ್ಲುವುದು, ಶಾರೀರಿಕ ಪೀಡೆ ಎಂಬರ್ಥದಲ್ಲಿ ತೆಗೆದುಕೊಳ್ಳದೆ ತೊಂದರೆ ಎಂಬರ್ಥದಲ್ಲಿ ತೆಗೆದುಕೊಳ್ಳುವುದು ಉಚಿತ. ನಾವು ಯಾರ ಹಿಂಸೆಯನ್ನೂ ಬಯಸದೆ ಇದ್ದರೂ ನಮ್ಮ ಜೀವನ ವ್ಯವಹಾರದಲ್ಲಿ ಸತತವಾಗಿ ತಿಳಿಯದೆಯೆ ನಮ್ಮಿಂದ ಇತರರಿಗೆ ತೊಂದರೆಯಾಗುತ್ತಿರುತ್ತದೆ. ಜೀವನಸಂಘರ್ಷದಲ್ಲಿ ಮಗ್ನರಾದ ನಾವು ತಿಳಿಯದೆ ಮಾಡಿದ ಹಿಂಸೆಯ ಕಡೆಗೆ ಗಮನ ಹರಿಸುವುದೇ ಇಲ್ಲ. ತಿಳಿದೋ ತಿಳಿಯದೆಯೋ ಇತರರಿಗೆ ನೀಡಿದ ತೊಂದರೆ ಪಾಪವೇ ಆಗಿರುತ್ತದೆ. ಇದು ನಮ್ಮ ಆಧ್ಯಾತ್ಮಿಕ ವಿಕಾಸಕ್ಕೆ ತಡೆಯಾಗಿ ಕುಳಿತು ಬಿಡುತ್ತದೆ. ಈ ಸೂಕ್ಷ್ಮವನ್ನು ಅರಿತ ಶಾಸ್ತ್ರಗಳು ಮನುಷ್ಯನಲ್ಲಿರುವ ಈ ಪಾಪವನ್ನು ತೆಗೆದು ಹಾಕಲು ಯಜ್ಞಭಾವವನ್ನು, ದಾನವನ್ನು, ತಪಸ್ಸನ್ನು ಬೋಧಿಸುತ್ತವೆ. ಭಗವಂತನಿಗೆ ನಮ್ಮ ಕರ್ಮಗಳನ್ನು ಅರ್ಪಿಸುವುದೇ ಯಜ್ಞದ ತಾತ್ಪರ್ಯ. **(ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ** — 'ಈ ಲೋಕದ ಜನರು ಭಗವಂತನಿಗಾಗಿ ಮಾಡುವ ಕರ್ಮಗಳನ್ನು ಬಿಟ್ಟು ಬೇರೆ ಕರ್ಮಗಳಿಂದ ಬಂಧಿಸಲ್ಪಡುತ್ತಾರೆ.' *(ಭಗವದ್ಗೀತಾ ೩.೯)* **'ಅಘಂ ಸ ಕೇವಲಂ ಭುಂಕ್ತೇ ಯಃ ಪಚತ್ಯಾತ್ಮಕಾರಣಾತ್ । ಯಜ್ಞಶಿಷ್ಟಾಶನಂ ಹ್ಯೇತತ್ ಸತಾಮನ್ನಂ ವಿಧೀಯತೇ॥'** *(ಮನುಸ್ಮೃತಿಃ, ೩.೧೧೮)* — 'ಯಾರು ತನಗಾಗಿಯೇ ಅಡಿಗೆ ಮಾಡಿಕೊಳ್ಳುವರೋ ಅವರು ಕೇವಲ ಪಾಪವನ್ನೇ ಉಣ್ಣುವರು. ಯಾರು ಸದಾಚಾರಿಗಳೋ ಅವರಿಗೆ ಯಜ್ಞಕ್ಕಾಗಿ ಉಪಯೋಗಿಸಿ ಉಳಿದ ಅನ್ನವೇ ಭೋಜನವಾಗಿ ವಿಧಿಸಲ್ಪಟ್ಟಿದೆ.' ಗೃಹಸ್ಥನಿಗೆ ಜೀವನದ ಪ್ರತಿ ಹಂತದಲ್ಲೂ ಹಂಚಿ ತಿನ್ನುವ ಶಿಕ್ಷಣ ನೀಡುತ್ತದೆ

ಸ್ಮೃತಿ. ಆದ್ದರಿಂದ ದಾನದ ಮೇಲೆ ಬಹಳ ಒತ್ತು ಕೊಡುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲೂ *(೫.೨.೩)* ಪ್ರಜಾಪತಿಯು ಮಾನವನಿಗೆ **ದ** ಎಂಬ ಅಕ್ಷರದಿಂದ ದಾನ-ಕೊಡಿ ಎಂದು ಉಪದೇಶಿಸಿದನೆಂದು ಹೇಳಿದೆ. ದಾನವನ್ನು ವಿಧಿಸಿರುವುದರಿಂದ ಮನಸ್ಸನ್ನು ಉದಾರಗೊಳಿಸುವ ಶಿಕ್ಷಣ ಸಿಗುತ್ತದೆ. ಸಂಕುಚಿತ ಮನಸ್ಸು ಉದಾರವಾದ ಆಧ್ಯಾತ್ಮಿಕ ಗುಣಗಳನ್ನು ಕುರಿತು ಚಿಂತಿಸಲಾರದು. ಉದಾರ ಮನಸ್ಸು ಮಾತ್ರ ಅಂಥ ಗುಣಗಳನ್ನು ಅರ್ಥ ಮಾಡಿಕೊಳ್ಳಬಲ್ಲದು.

ಇನ್ನು ತಪಸ್ಸು. ಏನಿದು ತಪಸ್ಸು? ಖಂಡಿತವಾಗಿಯೂ, ಕಾಡಿಗೆ ಹೋಗಿ ಮೂಗು ಹಿಡಿದು ಕೂಡುವುದಲ್ಲ. ತಪಸ್ಸು ಅಂದರೆ ಸುಡುವುದು. ನಮ್ಮ ಅಶುದ್ಧಿಗಳನ್ನು ಸುಟ್ಟು ಹಾಕುವುದು. ಮನಶ್ಶುದ್ಧಿಗೆ ಅಗತ್ಯವಾದ ಗುಣಗಳ ಅಭ್ಯಾಸವೇ ತಪಸ್ಸು. **‘ಅಹಿಂಸಾಸತ್ಯಮಸ್ತೇಯಂ ಶೌಚಮಿಂದ್ರಿಯನಿಗ್ರಹಃ । ದಾನಂ ದಯಾ ದಮಃ ಕ್ಷಾಂತಿಃ ಸರ್ವೇಷಾಂ ಧರ್ಮಸಾಧನಮ್ ॥**’– ‘ಅಹಿಂಸೆ, ಸತ್ಯವನ್ನು ನುಡಿಯುವುದು, ಇನ್ನೊಬ್ಬರ ವಸ್ತುವನ್ನು ಅವರ ಅನುಮತಿಯಿಲ್ಲದೆ ತೆಗೆದುಕೊಳ್ಳದಿರುವುದು, ಶುಚಿತ್ವ, ಇಂದ್ರಿಯಗಳನ್ನು ನಿಗ್ರಹದಲ್ಲಿಟ್ಟುಕೊಳ್ಳುವುದು, ದಾನ, ದಯೆ, ಮನಸ್ಸನ್ನು ನಿಗ್ರಹಿಸುವುದು, ಕ್ಷಮಾಗುಣ — ಇವು ಎಲ್ಲರಿಗೂ ಧರ್ಮಕ್ಕೆ ಸಾಧನವಾಗಿವೆ.’ *(ಯಾಜ್ಞವಲ್ಕ್ಯ ಸ್ಮೃತಿಃ-ಗೃಹಸ್ಥ ಧರ್ಮ ಪ್ರಕರಣ.೨೨)* ಈ ಅಹಿಂಸಾದಿ ಗುಣಗಳನ್ನು ನಾವೇಕೆ ಬೆಳೆಸಿಕೊಳ್ಳಬೇಕು? ಕಾಮ-ಕ್ರೋಧಾದಿ ಮಹಾಶತ್ರುಗಳನ್ನು ಎದುರಿಸಬೇಕಾದರೆ ಮಹಾಶಕ್ತಿಯೇ ಬೇಕಾಗುತ್ತದೆ. ಅಹಿಂಸಾದಿ ಗುಣಗಳ ದೀರ್ಘಕಾಲದ ಅಭ್ಯಾಸದಿಂದ ಅಂತಹ ಮಹಾನ್ ಶಕ್ತಿಯೊಂದು ಮಾನವನೊಳಗೆ ಜಾಗ್ರತವಾಗುತ್ತದೆ. ಆ ಶಕ್ತಿಯೇ ಕಾಮಾದಿ ದೋಷಗಳನ್ನು ನಾಶ ಪಡಿಸುತ್ತದೆ. ತಪಸ್ಸಿನ ಮಹಿಮೆಯನ್ನು ವರ್ಣಿಸುತ್ತ ಮನು ಹೇಳುತ್ತಾನೆ: ‘‘**ಯದ್ದುಸ್ತರಂ ಯದ್ದುರಾಪಂ ಯದ್ದುರ್ಗಂ ಯಚ್ಚ ದುಷ್ಕರಮ್ । ಸರ್ವಂ ತು ತಪಸಾ ಸಾಧ್ಯಂ ತಪೋ ಹಿ ದುರತಿಕ್ರಮಮ್ ॥**’’, ‘ಯಾವುದನ್ನು ದಾಟಲು ಕಷ್ಟವೋ, ಯಾವುದನ್ನು ಪಡೆಯುವುದು ಕಷ್ಟವೋ, ಯಾವುದನ್ನು ಸೇರುವುದು ಕಷ್ಟವೋ ಹಾಗೂ ಯಾವುದನ್ನು ಮಾಡುವುದು ಕಷ್ಟಕರವೋ — ಈ ಎಲ್ಲವನ್ನೂ ತಪಸ್ಸಿನಿಂದ ಸಾಧಿಸಬಹುದು. ತಪಸ್ಸು ಅದಮ್ಯ.’ *(ಮನುಸ್ಮೃತಿಃ, ೧೧.೨೩೮)*

ಹಿಂಸೆಯಲ್ಲಿ ತಿಳಿದು ಮಾಡುವ ಹಿಂಸೆ, ತಿಳಿಯದೆ ಮಾಡುವ ಹಿಂಸೆಯೆಂದು ಎರಡು ಬಗೆ. ತಿಳಿಯದೆ ಮಾಡುವ ಹಿಂಸೆ ಜೀವನ ನಿರ್ವಹಣೆಯ ಅವಿಭಾಜ್ಯ ಅಂಗ. ಅವುಗಳನ್ನು ಶಾಸ್ತ್ರಗಳು ಒಪ್ಪಿಕೊಂಡು ಅವುಗಳಿಗೆ ಪ್ರಾಯಶ್ಚಿತ್ತವಾಗಿಯೇ ಪಂಚ ಮಹಾಯಜ್ಞಗಳನ್ನು ವಿಧಿಸಿರುವುದು. ತಿಳಿದು ತಿಳಿದು ಹಿಂಸೆ ಮಾಡುವುದು ಬಹಳ ಕೆಟ್ಟದ್ದು. ಅದು ಸರ್ವಥಾ ವರ್ಜ್ಯ. ಮನುಷ್ಯ ಪರರಿಗೆ ಹಿಂಸೆ ಮಾಡುವುದಕ್ಕೆ ಹಿಂದಿರುವ ಮೂಲ ಕಾರಣ ಆತ ಮೊದಲು ತನ್ನೊಳಗೆ ಹಿಂಸೆ ಮಾಡಿಕೊಂಡಿರುತ್ತಾನೆ ಅಥವಾ ಹಿಂಸೆಗೆ ಅವಕಾಶ ಕೊಟ್ಟಿರುತ್ತಾನೆ. ಆ ಹಿಂಸೆ ಇನ್ನೊಬ್ಬರಿಂದ ಆಗಿರಬಹುದು ಅಥವಾ ಕಾಮ-ಕ್ರೋಧಾದಿಗಳು ಅವನ ಮನಸ್ಸನ್ನು ಹಿಂಸಿಸುವುದರಿಂದಲೂ ಆಗಿರಬಹುದು. ಅದನ್ನು ಅರಗಿಸಿಕೊಳ್ಳಲು ಸಾಧ್ಯವಾಗದಾಗ ಇನ್ನೊಬ್ಬರ ಮೇಲೆ ತೋರಿಸುತ್ತಾನೆ. ಇನ್ನೊಬ್ಬರಿಂದ ತನಗಾದ ಹಿಂಸೆಯನ್ನು ಅರಗಿಸಿಕೊಳ್ಳುವ ಗುಣಕ್ಕೆ ಕ್ಷಮೆ ಎಂದು ಹೆಸರು. ಇದನ್ನು ಬೆಳೆಸಿಕೊಳ್ಳಬೇಕು. **‘ಕ್ಷಮಾಗುಣೋ ಹಿ ಜಂತೂನಾಮ್ ಇಹಾಮುತ್ರ ಸುಖಪ್ರದಃ ।**’, ‘ಬದುಕಿನಲ್ಲೂ, ಸತ್ತ ನಂತರದ ಗತಿಯಲ್ಲಿಯೂ ಎಲ್ಲ ಜೀವಿಗಳಿಗೆ ಈ ಕ್ಷಮೆಯು ಸುಖವನ್ನು ತಂದುಕೊಡುತ್ತದೆ.’ *(ಆಪಸ್ತಂಬ ಸ್ಮೃತಿ, ೧೦.೨)* ಹಾಗೆಯೇ ಅಪಮಾನವನ್ನು ಸಹಿಸುವುದು. ಇನ್ನೊಬ್ಬರಿಂದಾದ ಅಪಮಾನವನ್ನು ಅರಗಿಸಿಕೊಳ್ಳದಿದ್ದಾಗ ಕ್ರೋಧ – ದ್ವೇಷಗಳ ವಶಕ್ಕೆ ಸಿಗಬೇಕಾಗುತ್ತದೆ. ಅಪಮಾನವನ್ನು ಸಹಿಸಿಕೊಳ್ಳುವುದರಿಂದ ನಮ್ಮೊಳಗೆ ಆಧ್ಯಾತ್ಮಿಕ ಶಕ್ತಿ ಹೆಚ್ಚುತ್ತದೆ ಎಂಬ ಸತ್ಯ ಗೊತ್ತಾದಾಗ ಅಪಮಾನಕ್ಕೆ ನಮ್ಮ ಉತ್ತರ ಬೇರೆ ರೀತಿಯಾಗುತ್ತದೆ. ಆಪಸ್ತಂಬರು ಹೇಳುತ್ತಾರೆ: ‘**ಅಪಮಾನಾದ್ಧಿ ತಪೋ ವೃದ್ಧಿಃ ಸಮ್ಮಾನಾತ್ ತಪಸಃ ಕ್ಷಯಃ ।**’, ‘ಅಪಮಾನವನ್ನು ಸಹಿಸಿಕೊಳ್ಳುವುದರಿಂದ ನಮ್ಮ ತಪಶ್ಶಕ್ತಿ ಹೆಚ್ಚಾಗುತ್ತದೆ. ನಮಗೆ ಸಿಕ್ಕ ಸಮ್ಮಾನದಿಂದ (ನಮ್ಮ ಅಹಂಕಾರ ಬೆಳೆಯುವುದರಿಂದ) ನಮ್ಮ ತಪಶ್ಶಕ್ತಿ ಕುಗ್ಗುತ್ತದೆ.’ *(ಆಪಸ್ತಂಬ ಸ್ಮೃತಿಃ ೧೦.೯)*. ಭರ್ತೃಹರಿ ತನ್ನ ವೈರಾಗ್ಯ ಶತಕದಲ್ಲಿ ನಮ್ಮ ಜೀವನದ ಮಜಲುಗಳನ್ನು ಸ್ವಾರಸ್ಯಕರವಾಗಿ ಬಿಚ್ಚಿಡುತ್ತ ಹೇಗೆ ಸಂಸಾರಿ ಮನುಷ್ಯ ತನಗೆ ಗೊತ್ತಿಲ್ಲದೆ ಕ್ಷಮಾದಿ ಗುಣಗಳನ್ನು ಆಚರಿಸುತ್ತಿದ್ದರೂ ಅವುಗಳ ಉದ್ದೇಶ ಸರಿಯಿಲ್ಲದೆ ಇರುವುದರಿಂದ ಅವು ನೀಡಬೇಕಾದ ಫಲವನ್ನು ನೀಡುತ್ತಿಲ್ಲ ಎನ್ನುತ್ತಾನೆ:

**ಕ್ಷಾಂತಂ ನ ಕ್ಷಮಯಾ ಗೃಹೋಚಿತಸುಖಂ ತ್ಯಕ್ತಂ ನ ಸಂತೋಷತಃ**
**ಸೋಢಾ ದುಃಸಹಶೀತವಾತತಪನಕ್ಲೇಶಾ ನ ತಪ್ತಂ ತಪಃ ।**
**ಧ್ಯಾತಂ ವಿತ್ತಮಹರ್ನಿಶಂ ನಿಯಮಿತಪ್ರಾಣೈರ್ನ ಶಂಭೋಃ ಪದಂ**
**ತತ್ತತ್ಕರ್ಮ ಕೃತಂ ಯದೇವ ಮುನಿಭಿಸ್ತೈಸ್ತೈಃ ಫಲೈರ್ವಂಚಿತಾಃ ॥**

‘ನಾವು ಕ್ಷಮೆಯನ್ನೇನೋ ಆಚರಿಸಿದೆವು, ಆದರೆ ಕ್ಷಮಾಗುಣವನ್ನು ಅಭ್ಯಾಸ ಮಾಡಲೆಂದೇ ಆಚರಿಸಲಿಲ್ಲ. ಸಾಂಸಾರಿಕ ಸುಖಗಳನ್ನು ಬಿಟ್ಟೆವು, ಸಂತೋಷದಿಂದೇನಲ್ಲ; ಸಹಿಸಲಾಗದ ಚಳಿಗಾಳಿ-ಬಿಸಿಲಝಳಗಳ ತೊಂದರೆಯನ್ನು ಸಹಿಸಿದೆವು, ಆದರೂ ತಪಸ್ಸನ್ನಾಚರಿಸಲಿಲ್ಲ. ಸಂಪತ್ತನ್ನು ಕುರಿತು ಹಗಲಿರುಳೂ ಪ್ರಾಣವನ್ನು ಬಿಗಿಹಿಡಿದು ಚಿಂತಿಸಿದೆವು, ಆದರೆ ಶಂಭುವಿನ ಪಾದಗಳನ್ನು ಧ್ಯಾನಿಸಲಿಲ್ಲ. ಮುನಿಗಳು ಯಾವ ಯಾವ ಕರ್ಮಗಳನ್ನು ಮಾಡಿದರೋ ಅದೆಲ್ಲವನ್ನು ಆಚರಿಸಿದರೂ ಅವುಗಳ ಫಲಗಳು ಮಾತ್ರ ನಮಗೆ ಸಿಗಲೇ ಇಲ್ಲ!’ *(ವೈರಾಗ್ಯ ಶತಕಮ್, ೬)*. ಅಂದರೆ, ಈ ಗುಣಗಳನ್ನು ಆಚರಿಸುವುದು ಕಷ್ಟವೇನಲ್ಲ ಎಂದಾಯಿತು. ಅವುಗಳನ್ನು ಆಧ್ಯಾತ್ಮಿಕಸಾಧನೆಯೆಂಬ ಉದ್ದೇಶವನ್ನಿಟ್ಟುಕೊಂಡು ಅಭ್ಯಸಿಸಬೇಕು ಅಷ್ಟೆ.

ಇನ್ನು ಕಾಮಾದಿಗಳಿಂದ ಆಗುವ ಹಿಂಸೆಯನ್ನು ತಡೆಯಲು ಅಥವಾ ಅರಗಿಸಿಕೊಳ್ಳಲು ಇಂದ್ರಿಯಜಯಾದಿಗಳನ್ನು ಹೇಳುತ್ತದೆ. **'ಇಂದ್ರಿಯಾಣಿ ವಶೀಕೃತ್ಯ ಗೃಹೇ ಏವ ವಸೇನ್ನರಃ । ತತ್ರ ತಸ್ಯ ಕುರುಕ್ಷೇತ್ರಂ ನೈಮಿಷಂ ಪುಷ್ಕರಾಣಿ ಚ ॥'**, 'ಮಾನವ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಮನೆಯಲ್ಲಿರಲಿ; ಅವನಿಗೆ ಅಲ್ಲೇ ಕುರುಕ್ಷೇತ್ರ, ನೈಮಿಷಾರಣ್ಯ, ಹಾಗೂ ಪುಷ್ಕರ.' *(ವ್ಯಾಸ ಸ್ಮೃತಿಃ, ೪.೧೩).* ಇಂದ್ರಿಯಗಳನ್ನು ಜಯಿಸಿದವನಿಗೆ ಎಲ್ಲ ತೀರ್ಥಕ್ಷೇತ್ರಗಳೂ ಅವನಿದ್ದಲ್ಲೇ ಇರುತ್ತವೆ. **'ವಾಕ್ಪಾಣಿಪಾದಚಾಪಲ್ಯಂ ವರ್ಜಯೇತ್ ಚಾತಿಭೋಜನಮ್ ।'**, 'ಗೃಹಿಯು ಕೈಬಾಯಿಕಾಲುಗಳ ಚಾಪಲ್ಯವನ್ನು ಹಾಗೂ ಅತಿಯಾದ ಭೋಜನವನ್ನು ತ್ಯಜಿಸಬೇಕು. *(ಯಾಜ್ಞವಲ್ಕ್ಯ ಸ್ಮೃತಿಃ- ಗೃಹಸ್ಥಧರ್ಮಪ್ರಕರಣ.೧೨)* **'ಇಂದ್ರಿಯಾರ್ಥೇಷು ಸರ್ವೇಷು ನ ಪ್ರಸಜ್ಯೇತ ಕಾಮತಃ । ಅತಿಸಕ್ತಿಂ ಚೈತೇಷಾಂ ಮನಸಾ ಸಂನಿವರ್ತಯೇತ್ ॥'**, 'ಕಾಮಕ್ಕೋಳಗಾಗಿ ಎಲ್ಲ ವಿಷಯವಸ್ತುಗಳಲ್ಲಿ ತೊಡಗಬಾರದು. ಇವುಗಳಲ್ಲಿ ಉಂಟಾಗಿರುವ ಅತಿಯಾದ ಆಸಕ್ತಿಯನ್ನು ಮನಸ್ಸಿನಿಂದ ಹಿಂದಕ್ಕೆ ಸೆಳೆದುಕೊಳ್ಳಬೇಕು.' *(ಮನುಸ್ಮೃತಿಃ ೪.೧೨).* ಬ್ರಹ್ಮಚರ್ಯವನ್ನು ಗೃಹಸ್ಥನಿಗೂ ವಿಧಿಸುವ ಸ್ಮೃತಿಯು ಬ್ರಹ್ಮಚರ್ಯವನ್ನು ಆತನಿಗೆ ಹೀಗೆ ವಿಧಿಸುತ್ತದೆ: **'ನಿಂದ್ಯಾಸ್ವಷ್ಟಾಸು ಚಾನ್ಯಾಸು ಸ್ತ್ರಿಯೋ ರಾತ್ರಿಷು ವರ್ಜಯನ್। ಬ್ರಹ್ಮಚಾರ್ಯೇವ ಭವತಿ ಯತ್ರ ತತ್ರಾಶ್ರಮೇ ವಸನ್ ।'**,'ಯಾವನು ಸ್ಮೃತಿಯಲ್ಲಿ ಹೇಳಿರುವ ವರ್ಜ್ಯದಿನಗಳನ್ನು ಬಿಟ್ಟು ಇನ್ನಿತರ ಸಮಯದಲ್ಲಿ ತನ್ನ ಪತ್ನಿಯನ್ನು ಸೇವಿಸುವನೋ ಅವನು ಯಾವ ಆಶ್ರಮದಲ್ಲೇ ಇರಲಿ ಬ್ರಹ್ಮಚಾರಿಯೇ.' *(ಮನುಸ್ಮೃತಿಃ ೩.೫೦).* ಭೀಷ್ಮ ಹೇಳುತ್ತಾನೆ, **'ಭಾರ್ಯಾಂ ಗಚ್ಛನ್ ಬ್ರಹ್ಮಚಾರೀ ಋತೌ ಭವತಿ ಚೈವ ಹ।'**, 'ಋತುಕಾಲದಲ್ಲಿ ಮಾತ್ರ ತನ್ನ ಪತ್ನಿಯಲ್ಲಿ ರತನಾದ ಗೃಹಸ್ಥನು ಬ್ರಹ್ಮಚಾರಿಯೆಂದೇ ಎಣಿಸಿಕೊಳ್ಳುವನು.' *(ಮಹಾಭಾರತ, ಅನುಶಾಸನ ಪರ್ವ, ೯೩.೧೧)* ಹೀಗೆ ಗೃಹಸ್ಥನು ಸಂಯಮವನ್ನು ಅಭ್ಯಾಸ ಮಾಡಬೇಕು.

**'ಕ್ರೋಧಯುಕ್ತೋ ಯದ್ಯಜ್ಯತೇ ಯಜ್ಜುಹೋತಿ ಯದರ್ಚತಿ । ಸರ್ವಂ ಹರತಿ ತತ್ತಸ್ಯ ಆಮಕುಂಭ ಇವೋದಕಮ್ ॥'**, 'ಕ್ರೋಧದಿಂದ ಕೂಡಿದವನಾಗಿ ಯಾವ ಯಾಗ ಮಾಡುತ್ತಾನೋ, ಯಾವ ಹೋಮ ಮಾಡುವನೋ, ಯಾವ ಅರ್ಚನೆಯನ್ನು ಮಾಡುವನೋ, ಆ ಕ್ರೋಧವು ಅವನು ಮಾಡಿದ್ದೆಲ್ಲವನ್ನೂ, ನೀರು ಹಸಿಯಾದ ಮಡಕೆಯನ್ನು ಕರಗಿಸುವಂತೆ ಅಪಹರಿಸಿಬಿಡುತ್ತದೆ.' *(ಆಪಸ್ತಂಬ ಸ್ಮೃತಿಃ, ೧೦.೮)* ಕ್ರೋಧವು ಮನುಷ್ಯನ ಜೀವನದಲ್ಲಿ ಸಂಪಾದಿಸಿದ ಅಲ್ಪ-ಸ್ವಲ್ಪ ಧರ್ಮವನ್ನೂ ನಾಶ ಮಾಡುತ್ತದೆ. ಜೀವನದಲ್ಲಿ ಇದ್ದದ್ದರಲ್ಲಿ ಸಂತೋಷ ಬೆಳಸಿಕೊಳ್ಳಬೇಕು. ಸಂತೋಷದಿಂದ ಮನಸ್ಸಿನಲ್ಲಿ ಲೋಭವುದಿಸುವುದಿಲ್ಲ. ಲೋಭದಿಂದ ಪರರ ವಸ್ತುವನ್ನು ಅಪಹರಿಸುವ ಬುದ್ಧಿಯುಂಟಾಗುತ್ತದೆ. ಲೋಭವಿಲ್ಲದಿದ್ದರೆ ಅದೂ ಉಂಟಾಗದು. **'ಸಂತೋಷಂ ಪರಮ್ ಆಸ್ಥಾಯ ಸುಖಾರ್ಥೀ ಸಂಯತೋ ಭವೇತ್। ಸಂತೋಷಮೂಲಂ ಹಿ ಸುಖಂ ದುಃಖಮೂಲಂ ವಿಪರ್ಯಯಃ ॥'**, 'ಸುಖವಾಗಿರಬೇಕೆಂದು ಬಯಸುವವನು ಉತ್ತಮವಾದ ಸಂತೋಷವೆಂಬ ಗುಣವನ್ನು ಬೆಳಸಿಕೊಂಡು ನಿಗ್ರಹದಿಂದ ಇರಬೇಕು. ಏಕೆಂದರೆ, ಸುಖಕ್ಕೆ ಮೂಲ ಸಂತೋಷವೇ. ಅಸಂತೋಷವೇ ದುಃಖಕ್ಕೆ ಮೂಲ.' *(ಮನುಸ್ಮೃತಿಃ ೪.೧೨).* ಸಮಾಜದಲ್ಲಿ ಇನ್ನೊಬ್ಬರು ಏನೆಂದುಕೊಳ್ಳುತ್ತಾರೋ ಎಂದು ಬದುಕುವವರು ಯಾವಾಗಲೂ ಅಸಂತುಷ್ಟರಾಗಿಯೇ ಇರುತ್ತಾರೆ. ಅವರ ಮನೆಯಲ್ಲಿ ಇಂತಹ ವಸ್ತು ಇದೆ, ನಮ್ಮ ಮನೆಯಲ್ಲಿಲ್ಲದಿದ್ದರೆ ಏನೆಂದುಕೊಳ್ಳುತ್ತಾರೋ, ಎಂದು ಚಿಂತಿಸುತ್ತ ತನ್ನ ಜೀವನಕ್ಕೆ ಅವಶ್ಯವಾದುದನ್ನು ಹೊರತುಪಡಿಸಿ ಮಿಕ್ಕದ್ದನ್ನು ಸಂಪಾದಿಸುವುದರಲ್ಲೇ ರತನಾದ ಗೃಹಸ್ಥನು ಹೇಗೆ ತಾನೇ ಶಾಂತಿಯನ್ನು ಕಾಣುವನು? ಹಾಗೆಯೇ, ಧನವನ್ನು ಗಳಿಸುವಾಗ ನ್ಯಾಯಮಾರ್ಗದಿಂದಲೇ ಗಳಿಸಬೇಕು. ಮಾಡುವ ಕರ್ಮ ನಮ್ಮೊಳಗೆ ತೃಪ್ತಿಯನ್ನೂ ನೀಡುವಂತಿರಬೇಕು. ಅರ್ಥ ಶೌಚವನ್ನು ಅಭ್ಯಸಿಸಬೇಕು. **'ಯತ್ಕರ್ಮ ಕುರ್ವತೋಽಸ್ಯ ಸ್ಯಾತ್ಪರಿತೋಷೋಽನ್ತರಾತ್ಮನಃ। ತತ್ಪ್ರಯತ್ನೇನ ಕುರ್ವೀತ ವಿಪರೀತಂ ತು ವರ್ಜಯೇತ್ ॥'**, 'ಯಾವ ಕರ್ಮ ಮಾಡಿದರೆ ಅಂತರಾತ್ಮನಿಗೆ ಸಂತೋಷವಾಗುವುದೋ ಅದನ್ನೇ ಪ್ರಯತ್ನಪೂರ್ವಕವಾಗಿ ಮಾಡಬೇಕು. ಮಿಕ್ಕವುಗಳನ್ನು ತ್ಯಜಿಸಬೇಕು.' *(ಮನುಸ್ಮೃತಿಃ ೪.೧೬೧).* **'ಸರ್ವೇಷಾಮೇವ ಶೌಚಾನಾಮ್ ಅರ್ಥಶೌಚಂ ಪರಂ ಸ್ಮೃತಮ್ । ಯೋಽರ್ಥೇ ಶುಚಿರ್ಹಿ ಸ ಶುಚಿರ್ನ ಮೃದ್ವಾರಿಶುಚಿಃ ಶುಚಿಃ ॥'**, 'ಎಲ್ಲ ಬಗೆಯ ಶೌಚಗಳಿಗಿಂತ ಅರ್ಥಶೌಚವೇ ಉತ್ತಮ. ಯಾರು ಅರ್ಥವಿಷಯದಲ್ಲಿ ಶುಚಿಯೋ, ಅವರೇ ನಿಜವಾಗಿ ಶುಚಿ. ಮಣ್ಣು, ನೀರುಗಳಿಂದ ಉಂಟಾಗುವ ಶುಚಿ ಶುಚಿಯಲ್ಲ.' *(ಮನುಸ್ಮೃತಿಃ ೪.೧೦೬).* ಮನಶ್ಶುದ್ಧಿಯನ್ನು ಗಳಿಸಬೇಕೆಂದಿರುವ ಗೃಹಸ್ಥ ನ್ಯಾಯಮಾರ್ಗದಿಂದಲೇ ಜೀವನೋಪಾಯವನ್ನು ಗಳಿಸಬೇಕು. ಅನ್ಯಾಯಮಾರ್ಗದಿಂದ ಸಂಪಾದಿಸುವವನಿಗೆ ಮನಶ್ಶಾಂತಿಯೆಲ್ಲಿ? ಮನಶ್ಶಾಂತಿಯಿಲ್ಲದವನಿಗೆ ಭಗವಂತನ ಧ್ಯಾನ ಮಾಡಲು ಯೋಗ್ಯತೆ ಹೇಗುಂಟಾಗುತ್ತದೆ?

ನ್ಯಾಯಮಾರ್ಗದಲ್ಲಿ ಧನ ಸಂಪಾದಿಸಬೇಕಾದರೆ ಸತ್ಯವನ್ನು ಹೇಳಬೇಕಾಗುತ್ತದೆ. **'ಸತ್ಯಂ ಬ್ರೂಯಾತ್ಪ್ರಿಯಂ ಬ್ರೂಯಾನ್ನ ಬ್ರೂಯಾತ್ಸತ್ಯಮಪ್ರಿಯಮ್ । ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥'**, 'ಪ್ರಿಯವಾದ ಸತ್ಯವನ್ನು ಹೇಳಬೇಕು. ಅಪ್ರಿಯವಾದ ಸತ್ಯವನ್ನು ಹೇಳಬಾರದು. ಪ್ರಿಯವಾದ ಸುಳ್ಳನ್ನೂ ಹೇಳಬಾರದು. ಇದೇ ಸನಾತನವಾದ ಧರ್ಮ.' *(ಮನುಸ್ಮೃತಿಃ ೪.೧೩೮).* ಸತ್ಯದ ಅನುಷ್ಠಾನ ಸಾಧ್ಯವಿಲ್ಲವೆನ್ನುವವರಿಗೆ, ಸಮಾಜವು ಅದನ್ನು ಸ್ವೀಕರಿಸುವುದಿಲ್ಲ ಎಂದು ದೂರುವವರಿಗೆ ಅಂತಹವರು ಈಗಿನ ವಾಣಿಜ್ಯಯುಗವನ್ನು ಪರಾಮರ್ಶಿಸಿ ನೋಡಬೇಕು. ವ್ಯವಹಾರದಲ್ಲಿನ ಪಾರದರ್ಶಕತೆಯನ್ನು ಕಾನೂನು, ಸಮಾಜ ಎರಡೂ ಅನುಮೋದಿಸಿ ಉದ್ಯಮದಲ್ಲಿರುವವರ ಮೇಲೆ ಪಾರದರ್ಶಕತೆಯನ್ನು ಹೇರುತ್ತದೆ.

ಯಾರಲ್ಲಿ ಪಾರದರ್ಶಕತೆ ಇಲ್ಲವೋ ಬಂಡವಾಳ ಹೂಡಿಕೆದಾರರೂ ತಮ್ಮ ಬಂಡವಾಳವನ್ನು ಅಂತಹ ಉದ್ಯಮವಂತರಿಗೆ ಕೊಡುವುದಿಲ್ಲ. ಕಾನೂನು ಕೂಡ ಅಂಥವರನ್ನು ಮುಲಾಜಿಲ್ಲದೆ ಶಿಕ್ಷಿಸುತ್ತದೆ. ಪಾರದರ್ಶಕತೆಯೆಂದರೆ ಸತ್ಯವೇ. ಇದರಿಂದ ತಿಳಿದು ಬರುವುದೇನೆಂದರೆ, ಆಚರಿಸಲು ಕಷ್ಟವಾಗಬಹುದು ಅಥವಾ ನಮಗೆ ಸದ್ಯಕ್ಕೆ ನಷ್ಟವಾದಂತೆ ಅನ್ನಿಸಬಹುದು. ಆದರೆ ಅದರ ದೀರ್ಘಕಾಲಿಕ ಶಾಶ್ವತವಾದ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಗತ್ಯಂತರವಿಲ್ಲದೆ ಸಮಾಜ ಸತ್ಯವನ್ನು ಸ್ವೀಕರಿಸಲೇಬೇಕು. ಅಸತ್ಯವನ್ನು ಶರಣು ಹೊಂದಿದರೆ ಸದ್ಯಕ್ಕೆ ಬಹಳ ಅನುಕೂಲವಾದಂತೆ ಅನ್ನಿಸಬಹುದು, ಆದರೆ ಮನುಷ್ಯ ಯಾವಾಗಲೂ ಭಯ-ಉದ್ವೇಗಗಳೊಂದಿಗೆ ಜೀವನ ನಡೆಸಬೇಕು. ಒಂದು ಅಸತ್ಯವನ್ನು ಸಾಧಿಸಲು ಇನ್ನೊಂದು ಅಸತ್ಯವನ್ನು ನುಡಿಯಬೇಕು. ಕೊನೆಗೆ ಪರಿಶೀಲಿಸಿದರೆ, ಅಸತ್ಯವನ್ನು ಮನುಷ್ಯ ಸತ್ಯವೆಂದೇ ಸಾಧಿಸಬೇಕಾಗುತ್ತದೆ. ಎಂದರೆ, ಅಸತ್ಯಕ್ಕೆ ಸತ್ಯದ ಆವಶ್ಯಕತೆಯಿದೆ; ಸತ್ಯಕ್ಕೆ ಅಸತ್ಯದ ಆವಶ್ಯಕತೆಯಿರುವುದಿಲ್ಲ. ಅಷ್ಟೇ ಅಲ್ಲದೆ, ಆಧ್ಯಾತ್ಮಿಕ ಜೀವನದ ಸಾಧನಗಳಲ್ಲಿ ಸತ್ಯವೇ ಶ್ರೇಷ್ಠವಾದದ್ದು. ಸತ್ಯನಾರಾಯಣನನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಸತ್ಯವಿಲ್ಲದೆ ಸಾಧ್ಯವಿಲ್ಲ. ಇದರ ಹಿಂದಿರುವ ಮನಶ್ಶಾಸ್ತ್ರ ಏನೆಂದರೆ, ಸತ್ಯದ ಕಡೆ ವಾಲಿರುವ ಮನಸ್ಸು ಎಲ್ಲ ಕ್ಷೇತ್ರಗಳಲ್ಲಿಯೂ ಸತ್ಯವನ್ನೇ ಹೊಂದಲು ಇಚ್ಛಿಸುತ್ತದೆ. ಹೀಗೆ ಅರಸುತ್ತ ಹೋದಂತೆ, ತೋರಿಕೆಯ ಜಗತ್ತಿನ ಹಿಂದಿರುವ ಏಕಮಾತ್ರ ಸತ್ಯವಾದ ಭಗವಂತನಲ್ಲಿ ಮನಸ್ಸು ಕಟ್ಟಕಡೆಗೆ ನಿಲ್ಲುತ್ತದೆ. ಸಂಸಾರದಲ್ಲಿ ಸತ್ಯವನ್ನು ಕಟ್ಟುನಿಟ್ಟಾಗಿ ಆಚರಿಸುವುದು ಸುಲಭವಲ್ಲದ್ದರಿಂದ ಧರ್ಮಶಾಸ್ತ್ರಗಳು ಸತ್ಯದ ಅನುಷ್ಠಾನದಲ್ಲೂ ಗೃಹಸ್ಥನಿಗೆ ಮಾತ್ರ ರಿಯಾಯತಿಯನ್ನು ನೀಡುತ್ತದೆ. ಅದೇ ಈ ಮೇಲಿನ ಸ್ಮೃತಿಯ ಆದೇಶ — ಅಪ್ರಿಯವಾದ ಸತ್ಯವನ್ನು ಹೇಳಬಾರದು.

ಪ್ರತಿನಿತ್ಯ ಹೇಗಾದರೂ ಸ್ವಲ್ಪವಾದರೂ ಸಮಯ ತೆಗೆದು ಜೀವನದ ಕ್ಷಣಿಕತ್ವವನ್ನು ಕುರಿತು ಚಿಂತಿಸಬೇಕು. ಒಂದಲ್ಲ ಒಂದು ದಿವಸ ನಮ್ಮ ಇಷ್ಟ ವಸ್ತುವನ್ನೋ, ಇಷ್ಟ ವ್ಯಕ್ತಿಯನ್ನೋ ಅಗಲಬೇಕಾಗಿ ಬರುತ್ತದೆ. ಎಲ್ಲ ಎಷ್ಟೇ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿದ್ದರೂ ಅಗಲಿಕೆ ಖಂಡಿತ, ಇದು ಪ್ರಕೃತಿಯ ನಿಯಮ; ಬದಲಾವಣೆಯೇ ನಿಯಮ. ಅಂತಹ ಸ್ಥಿತಿಯನ್ನು ನಮ್ಮ ಮನಸ್ಸು ಸ್ವೀಕರಿಸಲು ತಯಾರಾಗಿದೆಯೋ ಎಂದು ಪರೀಕ್ಷಿಸಿಕೊಳ್ಳುತ್ತಿರಬೇಕು. ಸತ್ಯವಾದದ್ದನ್ನು, ಶಾಶ್ವತವಾದ ತತ್ತ್ವವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು. ಆ ಸಮಯ ಬಂದಾಗ ನೋಡಿಕೊಳ್ಳೋಣ; ಈಗಲೇ ಏಕೆ ಎಂದು ಕೊಂಕುನುಡಿಯುವವರಿಗೆ ಆ ಸಮಯ ಯಾವ ಕ್ಷಣದಲ್ಲಾದರೂ ಬಂದೀತು ಎಂಬ ಪ್ರಜ್ಞೆಯಿರದು. ಆದ್ದರಿಂದಲೇ ಮನು ನಾವು ಈಗಲಿಂದಲೇ ಪ್ರತಿನಿತ್ಯ ಅದನ್ನು ಅಭ್ಯಸಿಸಬೇಕೆಂದು ಉಪದೇಶಿಸುತ್ತಾನೆ. '**ಏಕಾಕೀ ಚಿಂತಯೇತ್ ನಿತ್ಯಂ ವಿವಿಕ್ತೇ ಹಿತಮಾತ್ಮನಃ । ಏಕಾಕೀ ಚಿಂತಯಾನೋ ಹಿ ಪರಂ ಶ್ರೇಯೋ ಹಿ ಗಚ್ಛತಿ ॥**', 'ಪ್ರತಿನಿತ್ಯವೂ ಏಕಾಂತಸ್ಥಳದಲ್ಲಿ ಒಬ್ಬಂಟಿಗನಾಗಿ ತನ್ನ ಹಿತವನ್ನು ಕುರಿತು ಚಿಂತಿಸಬೇಕು. ಹೀಗೆ ಒಬ್ಬೊಂಟಿಗನಾಗಿ ಚಿಂತಿಸುವವನು ಪರಮ ಶ್ರೇಯಸ್ಸನ್ನು ಪಡೆಯುವನು.' *(ಮನುಸ್ಮೃತಿಃ ೪.೨೫೮)* ಜಗತ್ತಿನ ಅಸಾರತೆ ಸರಿಯಾಗಿ ಅರ್ಥವಾಗಬೇಕಾದರೆ ಒಂದು ಸ್ಥಳದಲ್ಲಿ ಕುಳಿತು ಪ್ರಶಾಂತ ಚಿತ್ತದಿಂದ ಚಿಂತಿಸಬೇಕು.

## ಉಪಸಂಹಾರ

ಹೀಗೆ ಧರ್ಮಶಾಸ್ತ್ರಗಳು ಮಾನವನ ಕಾಮಗಳನ್ನು ಬೇಲಿಯೊಳಗಿಟ್ಟು, ಅವುಗಳನ್ನು ಉದಾತ್ತಗೊಳಿಸಿ, ಆತ್ಮಕಾಮನಾಗುವುದು ಹೇಗೆಂಬ ಮಾರ್ಗದರ್ಶನ ಮಾಡುತ್ತವೆ. ಏಕೆಂದರೆ, ನಿಜವಾಗಿ ಎಲ್ಲ ಮಾನವನೂ ಅರಸುತ್ತಿರುವ ವಸ್ತು ಸುಖವೇ. ಆತ್ಮವಸ್ತು, ಭಗವಂತನೇ ಆ ನಿಜವಾದ ಶುದ್ಧಸುಖ. ಆದರೆ, ಅಜ್ಞಾನದಿಂದ ಆವೃತವಾದ ಮಾನವ ಆ ಸುಖವನ್ನು ವಿಷಯವಸ್ತುಗಳಲ್ಲಿ ಹುಡುಕುತ್ತಿರುತ್ತಾನೆ. ಕೃಷ್ಣಮೃಗವು ತನ್ನ ನಾಭಿಯಲ್ಲೇ ಇರುವ ಸುವಾಸನೆಯನ್ನು ಬೇರೆಲ್ಲೋ ಹುಡುಕುವಂತೆ! ಅಥವಾ, ಅವನಲ್ಲಿರುವ ಆ ಅವಿದ್ಯೆಯೇ ಆತ್ಮನನ್ನು ಹೊರತುಪಡಿಸಿ ಇನ್ನಿತರವುಗಳಲ್ಲಿ ಸುಖವನ್ನು ಹುಡುಕಿ ಪಡೆಯುವಂತೆ ಪ್ರೇರಿಸುತ್ತದೆ. ಆ ಪ್ರೇರಣೆಯನ್ನೇ ನಾವು 'ಕಾಮ' ಶಬ್ದದಿಂದ ಸಂಬೋಧಿಸುತ್ತೇವೆ. ಇದನ್ನು ಸೈದ್ಧಾಂತಿಕವಾಗಿ ವಿವರಿಸಿದರೆ ಸಾಮಾನ್ಯರ ಅರಿವಿಗೆ ಬರದು. ಹೀಗೆಂದೇ, ಧರ್ಮಶಾಸ್ತ್ರಗಳು ಎಲ್ಲರನ್ನೂ ಉದ್ದೇಶಿಸಿ 'ಹೀಗೆ ಮಾಡು', 'ಹೀಗೆ ಮಾಡಬೇಡ' ಎಂಬ ಭಾಷೆಯಲ್ಲೇ ಬೋಧಿಸುತ್ತವೆ. ಆರಂಭದಲ್ಲಿ ಶ್ರದ್ಧೆಯಿಂದ ಇವುಗಳನ್ನು ಆಚರಿಸಿದಾಗ ಮಾನವನ ಮನಸ್ಸು ಶುದ್ಧವಾಗುತ್ತ ಅವನ ಮನಸ್ಸಿಗೆ ಪ್ರಬುದ್ಧತೆ ಬಂದಾಗ, ತನ್ನಿಂತಾನೇ ಧರ್ಮಶಾಸ್ತ್ರಗಳ ಮೂಲ ಉದ್ದೇಶ ಅರ್ಥವಾಗುತ್ತದೆ. ಪುಟ್ಟ ಮಕ್ಕಳಿದ್ದಾಗ ತಾಯಿ-ತಂದೆಯರ ನಿರ್ಬಂಧನಕ್ಕೆ ಕಟ್ಟು ಬಿದ್ದು ಮನಸ್ಸಿಲ್ಲದ ಮನಸ್ಸಿನಿಂದ, ಹಿಡಿಶಾಪ ಹಾಕುತ್ತ ಯಾವುದನ್ನು ಆಚರಿಸಲು ತೊಡಗುತ್ತೇವೆಯೋ, ಪ್ರಬುದ್ಧರಾದ ಮೇಲೆ ಅವರೇಕೆ ನಮ್ಮನ್ನು ನಿರ್ಬಂಧಿಸಿದ್ದರು ಎಂಬ ತಥ್ಯ ಬೆಳಕಿಗೆ ಬಂದು ನಾವು ಅವುಗಳನ್ನು ಮೆಚ್ಚಿಕೊಳ್ಳುವುದಲ್ಲದೆ ನಮ್ಮ ಮಕ್ಕಳ ಮೇಲೂ ಆ ನೀತಿಯನ್ನು ಉಪಯೋಗಿಸುವುದು ಕಂಡು ಬರುವುದಿಲ್ಲವೆ? ಆದ್ದರಿಂದ, ಧರ್ಮಶಾಸ್ತ್ರಗಳಲ್ಲಿ ದೋಷವನ್ನು ಹುಡುಕದೆ ಶ್ರದ್ಧೆಯಿಂದ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಮನಸ್ಸು ಮಾಡಬೇಕು. ಅವುಗಳಲ್ಲಿರುವ ಎಷ್ಟೋ ಸಂಗತಿಗಳು ಈಗಿನ ಸಮಾಜಕ್ಕೆ ನಿರುಪಯುಕ್ತವೆಂದು ಎನಿಸಬಹುದು. ಆದರೂ, ಅವುಗಳಲ್ಲಿರುವ ಶಾಶ್ವತ ಧರ್ಮಗಳು, ಮೌಲ್ಯಗಳು ಎಂದೆಂದಿಗೂ ಪ್ರಸ್ತುತವೇ. ಅತ್ಯಂತ ಉಪಯುಕ್ತವಾದ ವಸ್ತುವೊಂದು ಅರ್ಧ ಹಾಳಾಗಿದ್ದರೆ ನಾವು ಅದರ ಇನ್ನರ್ಧವನ್ನು ಬಿಡದೆ ಸ್ವೀಕರಿಸುವಂತೆ, ಧರ್ಮಶಾಸ್ತ್ರಗಳ ವಿಷಯವಾಗಿಯೂ ಹಾಗೆ.